ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 12.11.2025.

**ಪಾಟೀ ಸವಾಲು – 1 ಮತ್ತು 6 ನೇ ಪ್ರತಿವಾದಿ ಪರಃ ಶ್ರೀ. ಪಿ.ಸಿ.ಎಸ್. ವಕೀಲರಿಂದಃ**

ನಾನು ತಿರುಕಪ್ಪ ತಂದೆ ಹನುಮಪ್ಪ ಅಡವೇರ ಈತನಿಗೆ ನೇರವಾಗಿ ಸಂಬಂಧ ಇಲ್ಲಾ ಅಂದರೆ ಸರಿ. ಈ ಪ್ರಕರಣದ ವಾದಿ ತನ್ನ ಗಂಡನ ಆಸ್ತಿ ಮೇಲೆ ಹಿಸ್ಸಾ ಕೇಳಿ ದಾಖಲು ಮಾಡಿದ್ದಾರೆ ಅಂದರೆ ಸರಿ. ನನ್ನ ತಾಯಿ ರೇಣುಕವ್ವ ಯಾವಾಗ ಮರಣ ಹೊಂದಿರುತ್ತಾಳೆ ನನಗೆ ಹೇಳಲು ಬರುವುದಿಲ್ಲಾ. ನನ್ನ ತಾಯಿ ಸುಮಾರು 15 ವರ್ಷದ ಹಿಂದೆ ಮರಣ ಹೊಂದಿರುತ್ತಾಳೆ. ನನ್ನ ತಾಯಿ ಜೀವಂತ ಇರುವವರೆಗೆ ತಿರುಕಪ್ಪನ ಮೇಲೆ ಹಿಸ್ಸೆ ಕೇಳಿ ಯಾವುದೇ ದಾವೆ ಮಾಡಿರುವುದಿಲ್ಲಾ. ನಾನು ಖಾಯಂ ತಾರೀಖ ನ್ಯಾಮತಿಯಲ್ಲಿ ವಾಸವಾಗಿರುತ್ತೇನೆ. ದಾವಾ ಆಸ್ತಿ ಬ್ಯಾಡಗಿ ತಾಲೂಕ ಮುತ್ತೂರ ಗ್ರಾಮದಲ್ಲಿ ಇವೆ ಅಂದರೆ ಸರಿ. ನಾನು ಎಂದೂ ದಾವಾ ಆಸ್ತಿ ವಹಿವಾಟ ಮಾಡಿಲ್ಲಾ ಅಂದರೆ ಸರಿಯಲ್ಲಾ. ದಾವಾ ಆಸ್ತಿಯ ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲಾ. ಸದರಿ ದಾವಾ ಆಸ್ತಿ ಊರಿನಿಂದ ಪಶ್ಚಿಮ ದಿಕ್ಕಿಗೆ ಬರುತ್ತದೆ. ನಾನು ಎಂದೂ ದಾವಾ ಆಸ್ತಿ ನೋಡಿಲ್ಲಾ ಅಂದರೆ ಸರಿಯಲ್ಲಾ. ದಾವೆಯಲ್ಲಿ ಅ ಆಸ್ತಿ ಅಂದರೆ ಜಮೀನು, ಬ ಆಸ್ತಿ ಎಂದರೆ ವಾಸವಿರುವ ಜಾಗೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಆಸ್ತಿಗಳು ತಿರುಕಪ್ಪನಿಗೆ ಗಂಡು ಮಕ್ಕಳು ಇಲ್ಲದ ಕಾರಣ 2 ಜನ ಹೆಣ್ಣು ಮಕ್ಕಳು ರೇಣುಕಮ್ಮ ಮತ್ತು ಪಾರ್ವತಮ್ಮ ಅಂತಾ ಇದ್ದು ಹನುಮಂತಪ್ಪ ತಿರುಕಪ್ಪನನ್ನು ದತ್ತಕ ಪಡೆದಿದ್ದಾನೆ. ಹನುಮಪ್ಪನಿಗೆ ದಾವಾ ಆಸ್ತಿಗಳು ಹೇಗೆ ಬಂದಿವೆ ಅಂದರೆ ಮುತ್ತಜ್ಜನಿಂದ ಬಂದಿರಬಹುದು ಎಂದು ನುಡಿಯುತ್ತಾರೆ. ಸದರಿ ದಾವೆಗೆ ಸಂಬಂಧಪಟ್ಟಂತೆ ದಾಖಲೆಗಳನ್ನು

ನಾನು ನೋಡಿರುವುದಿಲ್ಲಾ. ದಾವಾ ಆಸ್ತಿ ಹನುಮಪ್ಪ ಹನುಮಪ್ಪ ಅಡಿವೇರ ಈತನಿಗೆ ಸರ್ಕಾರದಿಂದ ವೈಯಕ್ತಿಕವಾಗಿ ಮಂಜೂರಾದ ಆಸ್ತಿ ಎಂದರೆ ಸರಿ. ದಾವಾ ಆಸ್ತಿ ಮಂಜೂರು ಆಗುವ ಸಮಯದಲ್ಲಿ ನಮ್ಮ ತಾಯಿ ಮತ್ತು ಚಿಕ್ಕಮ್ಮ ಮದುವೆಯಾಗಿ ಹೋಗಿದ್ದರು ಅಂದರೆ ಸರಿ. ಹನುಮಪ್ಪನಿಗೆ ದಾವಾ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ಹನುಮಪ್ಪ ಜೀವಂತ ಇದ್ದಾಗ ಈ ಆಸ್ತಿಗಳ ಬಗ್ಗೆ ತಿರುಕಪ್ಪನಿಗೆ ಹೋಗಬೇಕು ಅಂತಾ ವರದಿ ಕೊಟ್ಟಿದ್ದಾ ಅಂದರೆ ಸರಿ. ತಿರುಕಪ್ಪನ ಹೆಸರಿಗೆ 1986 ರಲ್ಲಿ ಜಮೀನುಗಳು ಖಾತೆ ಆಗಿವೆ ಅಂದರೆ ಸರಿ. ಆ ಬಗ್ಗೆ ಮುತ್ತೂರ ಗ್ರಾಮದ ಡ ನಂಬರ 1874 ಮಂಜೂರು ಆಗಿ ಇವತ್ತಿನವರೆಗೂ ಚಾಲ್ತಿ ಇದೆ ಅಂದರೆ ಸರಿ. ಸದರಿ ಡ ನಂಬರ 1874 ನ್ನು ನಮ್ಮ ತಾಯಿ ಜೀವಂತ ಇದ್ದಾಗ ಮತ್ತು ನಾನು ಇಲ್ಲಿಯವರೆಗೆ ಏಲ್ಲಿಯೂ ಪ್ರಶ್ನೆ ಮಾಡಿಲ್ಲಾ ಅಂದರೆ ಸರಿ. ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮ ಇವರಿಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲಾ ಅಂತಾ ಗೊತ್ತಿದುದ್ದರಿಂದ ಇಲ್ಲಿಯವರೆಗೆ ಪ್ರಶ್ನೆ ಮಾಡಿಲ್ಲಾ ಅಂದರೆ ಸರಿಯಲ್ಲಾ. ಶಾಂತವ್ವ ಇವಳಿಗೆ ಇಲ್ಲ ಸಲ್ಲದ ಬೋದನೆ ಮಾಡಿ ನಾವೇ ವಾದಿ ಕಡೆಯಿಂದ ಸುಳ್ಳು ಕೇಸನ್ನು ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲಾ. ನಮಗೆ ತಿರುಕಪ್ಪನ ಆಸ್ತಿಯಲ್ಲಿ ಯಾವುದೇ ಹಕ್ಕು ಹಿತ ಸಂಬಂಧ ಇಲ್ಲದೇ ಇದ್ದರೂ ಸಹ ನನ್ನನ್ನು ಮತ್ತು ಪ್ರತಿವಾದಿ 2 ರಿಂದ 5 ಇವರನ್ನು ಉದ್ದೇಶಪೂರ್ವಕವಾಗಿ ಪಾರ್ಟಿ ಮಾಡಿಸಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲಾ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಿಸ್ಸೆ ಇಲ್ಲಾ ಅಂದರೆ ಸರಿಯಲ್ಲಾ. ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.